58 (135) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾಲೇಜು ಶಿಕ್ಷಣ ಇಲಾಖೆಗೆ ಮಂಜೂರಾಗಿರುವ ಪ್ರಾಧ್ಯಾಪಕರು ಹಾಗೂ ಉಪನ್ಯಾಸಕರು ಮತ್ತು ಇತರ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಈ ಪೈಕಿ ಭರ್ತಿಯಾಗಿರುವ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು;

ಇ) ಕಾಲೇಜು ಶಿಕ್ಷಣ ಇಲಾಖೆಯಿಂದ ನಿಯೋಜನೆ ಮೇಲೆ ವಿವಿಧ ಇಲಾಖೆಗಳಲ್ಲಿ/ಸಚಿವಾಲಯಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿ/ಅಧಿಕಾರಿಗಳ/ಉಪನ್ಯಾಸಕರ ಸಂಖ್ಯೆ ಎಷ್ಟು (ಹೆಸರುಗಳೊಂದಿಗೆ ವಿವರಗಳನ್ನು ಒದಗಿಸುವುದು);

ಈ) ಇವರುಗಳು ಎಷ್ಟು ವರ್ಷದಿಂದ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ;

ಉ) ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಪ್ರಾಧ್ಯಾಪಕರ/ಉಪನ್ಯಾಸಕರ ಕೊರತೆ ಇರುವುದನ್ನು ಗಮನಿಸಿ ಶಿಕ್ಷಣ ಇಲಾಖೆಯು ಕ್ರಮಕ್ಕೆಗೊಂಡಿರುವ ಮಾದರಿಯಲ್ಲಿಯೇ ಕ್ರಮಕ್ಕೆಗೊಂಡು ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ನಿಯೋಜನೆಗಳನ್ನು ರದ್ದುಪಡಿಸಲು ಹಾಗೂ ಇನ್ನು ಮುಂದೆ ಯಾವುದೇ ನಿಯೋಜನೆ ನೀಡದಿರಲು ಸರ್ಕಾರ ಕ್ರಮಕ್ಕೆಗೊಳ್ಳುವುದೇ?

ಶ್ರೀ ಡಿ.ಎಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) :

ಅ) ಮತ್ತು ಆ) ಗೆ ಉತ್ತರ ಅನುಬಂಧ–1ರಲ್ಲಿ ವಿವರಿಸಲಾಗಿದೆ.

ಇ) ಮತ್ತು ಈ) ಗೆ ಉತ್ತರ ಅನುಬಂಧ–2ರಲ್ಲಿ ವಿವರಿಸಲಾಗಿದೆ.

ಉ) ಉಪನ್ಯಾಸಕರು ಯುಜಿಸಿ ವೇತನ ಪಡೆಯುತ್ತಿರುವುದರಿಂದ ಹಾಗೂ ಸಾಕಷ್ಟು ಉಪನ್ಯಾಸಕರ ಕೊರತೆ ಇರುವುದಗಿಂದ ಬೋಧನಾ ಕಾರ್ಯ ಹೊರತುಪಡಿಸಿ ಇತರೆ ಬೋಧಕೇತರ ಹುದ್ದೆಗಳಿಗೆ ಇನ್ನು ಮುಂದೆ ನಿಯೋಜನೆ ಮಾಡದಿರಲು ಗಂಭೀರ ಆಲೋಚನೆ ನಡೆಸುತ್ತಿದೆ.

ಅನುಬಂಧ–1

ಕಾಲೇಜು ಶಿಕ್ಷಣ ಇಲಾಖೆ

ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಮಂಜೂರಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಗಿನಂತಿದೆ

ಕ್ರಮ ಸಂಖ್ಯೆ	ಪದನಾಮ	ಮಂಜೂರಾದ ಹುದ್ದೆಗಳ ಸಂಖ್ಯೆ	ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1	2	3	4	5
1	ಆಯುಕ್ತರು	1	1	0
2	ನಿರ್ದೇಶಕರು	1	1	0
3	ಹೆಚ್ಚುವರಿ ನಿರ್ದೇಶಕರು	1	1	0

1	2	3	4	5
4	ಮುಖ್ಯ ಆಡಳಿತಾಧಿಕಾರಿ	1	1	0
5	ಜಂಟಿ ನಿರ್ದೇಶಕರು	8	5	3
6	ಲೆಕ್ಕಾಧಿಕಾರಿಗಳು	2	2	0
7	ಪ್ರಾಂಶುಪಾಲರು–ಗ್ರೇಡ್–II	23	15	8
8	ಪ್ರಾಂಶುಪಾಲರು–ಗ್ರೇಡ್–I	128	73	55
9	ಉಪನ್ಯಾಸಕರು	3059	2525	534
10	ಗ್ರಂಥಪಾಲಕರು	167	106	61
11	ದೈಹಿಕ ಶಿಕ್ಷಣ ಬೋಧಕರು	106	84	22
12	ಉಪ ನಿರ್ದೇಶಕರು	3	3	0
13	ಸಹಾಯಕ ನಿರ್ದೇಶಕರು	15	1	14
14	ಮ್ಯಾನೇಜರ್	76	44	32
15	ಅಧೀಕ್ಷಕರು	41	125	16
16	ಪ್ರಥಮ ದರ್ಜೆ ಸಹಾಯಕರು	238	201	37
17	ದ್ವಿತೀಯ ದರ್ಜೆ ಸಹಾಯಕರು	430	374	56
18	ಶೀಘ್ರಲಿಪಿಗಾರರು	13	12	1
19	ಬೆರಳಚ್ಚುಗಾರರು	200	127	73
20	ಗ್ರಂಥಾಲಯ ಸಹಾಯಕರು	90	7	83
21	ವಾಹನ ಚಾಲಕರು	11	9	2
22	ಅಟೆಂಡರ್	606	456	150
23	ಪರಿಚಾರಕರು ಹಾಗೂ ಇತರೆ ಸಮಾನ ವೇತನ ಶ್ರೇಣಿ	778	662	116

ಅನುಬಂಧ–2

ಕಾಲೇಜು ಶಿಕ್ಷಣ ಇಲಾಖೆ

ಕಾಲೇಜು ಶಿಕ್ಷಣ ಇಲಾಖೆಯಿಂದ ಬೇರೆ ಇಲಾಖೆಗಳಲ್ಲಿ ನಿಯೋಜನೆ ಮೇಲೆ ಸೇವೆ ಸಲ್ಲಿಸುತ್ತಿರುವ ಪ್ರಾಂಶುಪಾಲರು ಉಪನ್ಯಾಸಕರ ಬಗ್ಗೆ ವಿವರ

ಕ್ರಮ ಸಂಖ್ಯೆ	ಹೆಸರು, ಪದನಾಮ ಮತ್ತು ವಿಳಾಸ ಶ್ರೀ /ಶ್ರೀಮತಿ	ಯಾವ ಇಲಾಖೆಗೆ ನಿಯೋಜಿಸಲಾಗಿದೆ	ಎಷ್ಟು ವರ್ಷಗಳಿಂದ ನಿಯೋಜನೆ ಮೇಲೆ ಕೆಲಸ ನಿರ್ವಹಿಸುತ್ತಿದ್ದಾರೆ
1	2	3	4
1	ಡಾ: ದೇವಾನಂದ ಗಾಂವ್‌ಕರ್, ಗ್ರೇಡ್–1 ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಯಾದಗಿರಿ	ಜಿಲ್ಲಾ ಶಿಕ್ಷಣ ಅಧಿಕಾರಿ, ವಯಸ್ಕರ ಶಿಕ್ಷಣ ಇಲಾಖೆ, ಗುಲ್ಬರ್ಗಾ	3 ವರ್ಷ
2	ಡಾ: ಗುರುಮೂರ್ತಿ ಎಸ್. ಗ್ರೇಡ್–I ಪ್ರಾಂಶುಪಾಲರು, ಬೆಂಗಳೂರು	ಮಾನ್ಯ ರಾಜ್ಯಪಾಲರ ಆಪ್ತ ಕಾರ್ಯದರ್ಶಿ, ರಾಜಭವನ, ಬೆಂಗಳೂರು	6 ವರ್ಷ
3	ನರಸಿಂಹಮೂರ್ತಿ. ಆರ್. ಕನ್ನಡ ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಬಾಲಕರ ಕಾಲೇಜು, ಕೋಲಾರ	ಹಿಂದಿನ ಲೋಕೋಪಯೋಗಿ ಮತ್ತು ಇಂಧನ ಸಚಿವರ ವಿಶೇಷ ಕರ್ತವ್ಯಾಧಿಕಾರಿ	10 ವರ್ಷಗಳಿಂದ ಹಿಂದಿನ ಬೇರೆ ಬೇರೆ ಸಚಿವರ ವಿಶೇಷ ಕರ್ತವ್ಯಾಧಿಕಾರಿಯಾಗಿ ನಿಯೋಜನೆ ಮೇಲಿದ್ದು, ಇವರ ಸೇವೆಯನ್ನು ದಿನಾಂಕ: 03–02–06 ರಿಂದ ಮಾತ್ಯ ಇಲಾಖೆ ಹಿಂದಿರುಗಿಸಲಾಗಿದೆ. ಆದರೆ ಇವರು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ.

1	2	3	4
4	ಮೊಹಮ್ಮದ್ ಅಜಂ. ಅರ್ಥಶಾಸ್ತ್ರ ಉಪನ್ಯಾಸಕರು ಸರ್ಕಾರಿ ಮಹಿಳಾ ಕಾಲೇಜು, ಮಂಡ್ಯ	ಹಿಂದಿನ ಪಶುಸಂಗೋಪನಾ ಮತ್ತು ವಕ್ಫ್ ಸಚಿವರ ವಿಶೇಷ ಕರ್ತವ್ಯಾಧಿಕಾರಿ	10 ವರ್ಷಗಳಿಂದ ಹಿಂದಿನ ಬೇರೆ ಬೇರೆ ಸಚಿವರ ವಿಶೇಷ ಕರ್ತವ್ಯಾಧಿಕಾರಿಯಾಗಿ ನಿಯೋಜನೆ ಮೇಲಿದ್ದು, ಇವರ ಸೇವೆಯನ್ನು ದಿನಾಂಕ: 03–02–06 ರಿಂದ ಮಾತ್ರ ಇಲಾಖೆ ಹಿಂದಿರುಗಿಸಲಾಗಿದೆ. ಆದರೆ ಇವರು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ.
5.	ಹಿರೇಮಠ ಎಸ್.ಎಸ್. ರಾಜ್ಯಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಶಹಾಪುರ	ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಜಿಲ್ಲಾಧಿಕಾರಿ ಗುಲ್ಬರ್ಗಾ	3 ವರ್ಷದಿಂದ ನಿಯೋಜನೆ ಮೇಲಿದ್ದು ಜನರ ಸೇವೆಯನ್ನು ದಿನಾಂಕ: 27–01–06 ರಿಂದ ಮಾತ್ರ ಇಲಾಖೆ ಹಿಂದಿರುಗಿಸಲಗಿದೆ ಆದರೆ ಇವರು ದಿನಾಂಕ 27–02–06 ರಂದು ಕೆ.ಎ.ಸಿ. ಬಂದ ದಿನಾಂಕ: 3–03–06 ರವರೆಗೆ ತಡೆಯಾಜ್ಞೆ, ನಿಯೋಜನೆ ಮೇಲೆ ಮುಂದುವರೆದಿರುತ್ತಾರೆ.
6.	ಚನ್ನನರಸಿಂಹಪ್ಪ, ರಾಜ್ಯಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಬಾಲಕರ ಕಾಲೇಜು, ಚಿಂತಾಮಣಿ	ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಜಿಲ್ಲಾಧಿಕಾರಿ ರಾಯಚೂರು	05 ವರ್ಷ
7	ಗೋಪಾಲ್ ಕೆ.ಎಸ್. ಭೌತಶಾಸ್ತ್ರ ಹಿ.ಶ್ರೇ.ಉ. ಸರ್ಕಾರಿ ಬಾಲಕರ ಕಾಲೇಜು ಚಿಂತಾಮಣಿ	ಯೋಜನಾ ಸಮನ್ವಯಾಧಿಕಾರಿ ಐ.ಟಿ.ಡಿ.ಪಿ. ಮಂಗಳೂರು	01 ವರ್ಷ

1	2	3	4
8	ಬಸವರಾಜು ಡಿ. ರಸಾಯನಶಾಸ್ತ್ರ ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಿರಾ	ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಶಿವಮೊಗ್ಗ	02 ವರ್ಷ
9	ಕೊಟ್ರಯ್ಯ ಎ.ಎಂ.ಆರ್. ರಸಾಯನಶಾಸ್ತ್ರ ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು	ಲೈಸನ್ ಆಫೀಸರ್, ಎನ್.ಎಸ್.ಎಸ್. ಸೆಲ್, ವಾರ್ತಾ ಮತ್ತು ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಇಲಾಖೆ ಬೆಂಗಳೂರು.	05 ವರ್ಷ
10	ಸೈಯದ್ ಅಹಮದ್ ಮುಜಾದಾವಿ, ಗಣಿತಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಕಾಲೇಜು, ಗುಲ್ಬರ್ಗಾ	ಪ್ರಾಂಶುಪಾಲರು, ಗುಲ್ಬರ್ಗಾ ಜಿಲ್ಲಾ ತರಬೇತಿ ಸಂಸ್ಥೆ, ಗುಲ್ಬರ್ಗಾ.	04 ವರ್ಷ
11	ಗೋವಿಂದೇಗೌಡ ಎಸ್.ಎನ್. ರಾಜ್ಯಶಾಸ್ತ್ರ ಆಯ್ಕೆ ಶ್ರೇಣಿ ಉಪನ್ಯಾಸಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹೆಬ್ಬೂರು	ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಹಾಸನ	05 ವರ್ಷ

1	2	3	4
12	ವಸಂತರಾಜಶೆಟ್ಟಿ ಅರ್ಥಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು ಐಡಿಎಸ್‌ಜಿ ಸರ್ಕಾರಿ ಕಾಲೇಜು ಚಿಕ್ಕಮಗಳೂರು	ಜಿಲ್ಲಾ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಅಧಿಕಾರಿ, ಕಾರವಾರ.	05 ವರ್ಷ
13	ಡಾ: ಎಂ. ಮಾರ್ತಾಂಡಪ್ಪ ಭೌತಶಾಸ್ತ್ರ ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ವಿಜ್ಞಾನ ಕಾಲೇಜು, ಹಾಸನ	ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಧಾರವಾಡ	01 ವರ್ಷ
14	ಜಿ. ಯೋಗಾನಂದ, ವಾಣಿಜ್ಯಶಾಸ್ತ್ರ ಆಯ್ಕೆ ಶ್ರೇಣಿ ಉಪನ್ಯಾಸಕರು ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು	ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ಉಡುಪಿ	01 ವರ್ಷ
15	ಎಂ.ಜಿ.ಶಂಕರಲಿಂಗೇಗೌಡ, ಪ್ರಾಣಿಶಾಸ್ತ್ರ ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ವಿಜ್ಞಾನ ಕಾಲೇಜು, ಹಾಸನ	ಜಿಲ್ಲಾ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಅಧಿಕಾರಿ, ಹಾಸನ	09 ವರ್ಷ

1	2	3	4
16	ಡಿ. ಅಂಜನಪ್ಪ, ಕನ್ನಡ ಉಪನ್ಯಾಸಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ನರಸಿಂಹರಾಜಪುರ	ಕರ್ನಾಟಕ ಪರಿಶಿಷ್ಟ ಜಾತಿಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಉಡುಪಿ	06 ತಿಂಗಳು
17	ಡಾ: ಫಾರೂಕ್ ಅಹ್ಮದ್ ವಾಣಿಜ್ಯ ಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೀದರ್	ಪ್ರಾಂಶುಪಾಲರು, ಜಿಲ್ಲಾ ತರಬೇತಿ ಸಂಸ್ಥೆ, ಬೀದರ್.	06 ತಿಂಗಳು
18	ಚಿಂತಾಮಣಿ. ಎಂ.ಐ. ಕನ್ನಡ ಆಯ್ಕೆ ಶ್ರೇಣಿ ಉಪನ್ಯಾಸಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಬೈಲಹೊಂಗಲ .	ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ	03 ವರ್ಷ
19	ಡಾ: ವಿಜಯ. ಎಸ್.ಎಸ್. ಕನ್ನಡ ಹಿರಿಯ ಶ್ರೇಣಿ ಉಪನ್ಯಾಸಕರು, ಸರ್ ಎಂ.ವಿ. ಕಲಾ ಮತ್ತು ವಾಣಿಜ್ಯ ಕಾಲೇಜು, ಭದ್ರಾವತಿ	ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ	03 ವರ್ಷ
20	ಡಾ: ವಿಜಯಕುಮಾರಿ ಎಸ್.ಕರಿಕರ್. ಕನ್ನಡ ಆಯ್ಕೆ ಶ್ರೇಣಿ ಉಪನ್ಯಾಸಕರು, ಸರ್ಕಾರಿ ಕಾಲೇಜು, ಗುಲ್ಬರ್ಗಾ.	ಮಹಿಳಾ ವಿಶ್ವವಿದ್ಯಾಲಯ, ಬಿಜಾಪರ	03 ವರ್ಷ

1	2	3	4
21	ಡಾ: ವಿಜಯ ಬಿ.ಕೋರಿಶೆಟ್ಟಿ, ಸಮಾಜಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ.	ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ	3 ವರ್ಷ
22	ಆರ್. ನಾರಾಯಣ್ ರೆಡ್ಡಿ, ವಾಣಿಜ್ಯಶಾಸ್ತ್ರ ಹಿರಿಯ ಶ್ರೇಣಿ ಉಪನ್ಯಾಸಕರು	ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ. ಮಡಿಕೇರಿ.	07 ವರ್ಷಗಳಿಂದ ವಿವಿಧ ಇಲಾಖೆಗಳಲ್ಲಿ ನಿಯೋಜನೆ ಮೇಲೆ ಇದ್ದ ಇವರ ಸೇವೆಯನ್ನು ಮಾತ್ರ ಇಲಾಖೆಗೆ ವಾಪಸ್ ಪಡೆಯಲಾಗಿದೆ. ಆದರೆ ಇವರು ಇದುವರೆವಿಗೂ ಮಾತೃ ಇಲಾಖೆಯಲ್ಲಿ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ.
23	ಎನ್.ಎಸ್. ರಾಮಾಂಜನೇಯಲು ದೈಹಿಕ ಶಿಕ್ಷಣ ಶಿಕ್ಷಕರು, ಸರ್ಕಾರಿ ಬಾಲಕರ ಕಾಲೇಜು, ಚಿಂತಾಮಣಿ.	ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ. ಮಂಗಳೂರು	06 ವರ್ಷಗಳಿಂದ ವಿವಿಧ ಇಲಾಖೆಗಳಲ್ಲಿ ನಿಯೋಜನೆ ಮೇಲೆ ಇದ್ದ ಇವರ ಸೇವೆಯನ್ನು ಮಾತೃ ಇಲಾಖೆಗೆ ವಾಪಸ್ ಪಡೆಯಲಾಗಿದೆ. ಆದರೆ ಇವರು ಇದುವರೆವಿಗೂ ಮಾತೃ ಇಲಾಖೆಯಲ್ಲಿ ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ.
24	ಡಾ: ನಾರಾಯಣ ಬಿ.ಪವಾರ್, ಪ್ರಥಮ ದರ್ಜೆ ಸಹಾಯಕರು, ಕಾಲೇಜು ಶಿಕ್ಷಣ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು	ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ	03 ವರ್ಷ